ಶ್ರೀ ಕೆ. ಎ. ಶಂಕರಗೌಡ—ಇಂಥ ಕೇಸಸ್ ಇದ್ದರೆ ಮೊನ್ಯ ಸದಸ್ಯರು ನನಗೆ ಬರೆದು ತಿಳಿಸಬಹುದು ಇಲ್ಲದಿದ್ದರೆ, ಖುದ್ದಾಗಿ ತಿಳಿಸಿದರೆ ನಾನು ಶೀಘ್ರವಾಗಿ ಕಾರ್ಯಕ್ರಮ ತೆಗೆದು ಕೊಂಡು ಉಪಾಧ್ಯಾಯರನ್ನು ನೇಮಿಸುವುದಕ್ಕೆ ಕ್ರಮತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ಕಡ್ಡಾಯ ಶಿಕ್ಷಣ ಮಾಡಿದ್ದೀರಿ. ನಮ್ಮ ಬಿಜಾಪುರ ಜಿಲ್ಲೆಯಲ್ಲ ಶಿಕ್ಷಕರ ಸಂಖ್ಯೆ ಬಹಳ ಕಡಿಮೆಯಾಗಿದ್ದು ಸ್ಕೂಲ್ ಬೋರ್ಡಿನವರು ಕೇಳಿದರೂ ಕೂಡ ಉಪಾಧ್ಯಾಯರುಗಳನ್ನು ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಎ. ಶಂಕರಗೌಡ.—ಬಿಜಾಪುರ ಜಿಲ್ಲೆಯಲ್ಲಿ ಉಪಾಧ್ಯಾಯರ ಸಂಖ್ಯೆ ಹೆಚ್ಚಾಗಿ ಇದೆ ಎಂದು ವರದಿ ಬಂದಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಇಂಟರ್‌ವ್ಯೂ ಮಾಡಿ ಡಿ.ಎಲ್.ಆರ್.ಸಿ. ಯವರು ಒಂದು ಪಟ್ಟಿಯನ್ನು ಮಾಡಿದ್ದಾರೆ. ಇನ್ನೂ ಅದರ ಅರ್ಧ ಭರ್ತಿಮಾಡಿಕೊಂಡಿಲ್ಲ. ಇದರಿಂದ ಅಲ್ಲಿ ಸಾಕಷ್ಟು ಉಪಾಧ್ಯಾಯರುಗಳು ಇಲ್ಲವೆಂದು ಅರ್ಥವಾಗುವುದಿಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಯಾವುದಾದರೂ ಪಾಠಶಾಲೆಯಲ್ಲ ಸಾಕಷ್ಟು ಉಪಾಧ್ಯಾಯು ರುಗಳ ಸಂಖ್ಯೆ ಇಲ್ಲವೆಂದು ನನ್ನ ಗಮನಕ್ಕೆ ತಂದರೆ, ಅದನ್ನು ಸರಿಪಡಿಸುತ್ತೇನೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ.—ಈಗ ನಾಲ್ಕು ತರಗತಿಗಳು ಇರತಕ್ಕ ಶಾಲೆಗಳಲ್ಲ ಒಬ್ಬ ಉಪಾಧ್ಯಾಯ 40 ಜನ ಇದ್ದರೆ ಕೊಡುತ್ತೀರಿ ಎಂದು ಹೇಳಿದ್ದೀರಿ. ಆದರೆ ಒಂದು ಕ್ಲಾಸನ್ನು ಒಂದು ದಿವಸಕ್ಕೆ ಎರಡು ಗಂಟೆಗಳ ಕಾಲ ಹ್ಯಾಂಡಲ್ ಮಾಡುವುದಾದರೆ, 8 ಗಂಟೆ ಕಾಲವಾಗುತ್ತದೆ. ಆದರಿಂದ ನಿಮ್ಮ ಪಾಠ ಬೋಧನೆ ಎಷ್ಟರಮಟ್ಟಿಗೆ ವಿದ್ಯಾರ್ಥಿಗಳಿಗೆ ಹಿಡಿಯು ಬಹುದು ಎಂಬುದನ್ನು ತಾವು ಯೋಚನೆ ಮಾಡಿದ್ದೀರಾ ?

ಶ್ರೀ ಕೆ. ಎ. ಶಂಕರಗೌಡ.—ಪ್ರಶ್ನೆ ನನಗೆ ಅರ್ಥವಾಗಲಲ್ಲ.

9–00 A.M.

ಶ್ರೀ ಎಸ್. ಎಚ್. ಪುಟ್ಟರಂಗನಾಥ.—40 ಜನ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯನು ಇರಬೇಕು ಎಂದು ಹೇಳಿದಿರಿ. ಆದರೆ ಒಬ್ಬನು ನಾಲ್ಕು ಕ್ಲಾಸುಗಳಿಗೆ ಪಾಠ ಹೇಳುವುದು ಸಾಧ್ಯವೇ? ಒಂದು ತರಗತಿಗೆ ಎರಡು ಗಂಟೆ ಪಾಠ ಹೇಳಿದರೆ ಎರಡು ತರಗತಿಗೆ ಎಂಟು ಗಂಟೆಯಾಗುತ್ತದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ?

ಶ್ರೀ ಕೆ. ಎ. ಶಂಕರಗೌಡ. —ಎಂಟು ಗಂಟೆ ಪಾಠ ಹೇಳುತ್ತಾರೆ.

ಶ್ರೀ ಅಜೀಜ್ ಸೇಠ್.—ಸರಕಾರದಲ್ಲ ಯಾವ ಪ್ರಶ್ನೆ ಕೇಳಿದರೂ ನಮ್ಮ ಗಮನಕ್ಕೆ ತಂದರೆ ಮುಂದಕ್ಕೆ ನೋಡುತ್ತೇವೆ, ಅದನ್ನು ಮಾಡುತ್ತೇವೆ ಎಂದು ಮಂತ್ರಿಗಳು ಉತ್ತರ ಕೊಡುತ್ತಾರೆ. ನಾವು ಇವನ್ನೆರ್ಲಾ ಸರಕಾರದ ಗಮನಕ್ಕೆ ತರಬೇಕಾದರೆ ಸರಕಾರದ ಸಿಬ್ಬಂದಿ ಇರುವುದು ಏತಕ್ಕೆ? ಈ ಸಿಬ್ಬಂದಿಗೆ ಡೈರೆಕ್ಟರ್ ಅವರಿಗೆ ಸಂಬಳ ಕೊಡಲು ಲಕ್ಷಾಂತರ ರೂಪಾಯಿ ಈ ಇಲಾಖೆಯ ಮೇಲೆ ಖರ್ಚು ಮಾಡುವುದು ಯಾತಕ್ಕೆ ? ಅಲ್ಲಿರುವ ಅಧಿಕಾರಿಗಳು ನಿದ್ದೆ ಮಾಡುತ್ತಾರೆಯೇ ?

ಶ್ರೀ ಕೆ. ಎ. ಶಂಕರಗೌಡ.—ನಮ್ಮ ಸಿಬ್ಬಂದಿ ವರದಿ ಪ್ರಕಾರ ಅಂಥ ನ್ಯೂನ್ಯತೆಗಳಿಲ್ಲ. ಒಂದು ವೇಳೆ ಅವರ ಕಣ್ಣಿಗೆ ಕಾಣದ್ದು ನಿಮ್ಮ ಕಣ್ಣಿಗೆ ಬಿದ್ದರೆ ಅಂಥಾದ್ದನ್ನ ಹೇಳಿದರೆ ಅದನ್ನು ನಾವು ಸರಿಪಡಿಸುತ್ತೇವೆ.

Grant of 2 per cent of Foreste Rvenue to Khanapur Taluk

307. Sri N. B. SIRDESAI (Khanapur).—

Will the Minister for Revenue and Forests be pleased to state :—

(*a*) whether any respresentation was made from the T.D.B., Khanapur and the D.D.C., Belgaum requesting the Government to sanction the yearly grant of at least 2 per cent out of the Forest Revenue obtained from Khanapur Taluk ;

(SRI N. B. SIRDESAI)

(*b*) whether Government has considered this matter ;

(*c*) the reason for delay in following the former procedure of granting 2 per cent Forest Revenue to Khanapur Taluk ?

A.—Sri B. RACHAIAH (Minister for Revenue and Forests).—

(*a*) Yes.

(*b*) Under consideration.

(*c*) To consider implications as such payments have to be given to all Taluks.

Sri N. B. SIRDESAI.—Sir, is Gnvernment aware of the fact that some taluka boards in some of the districts are being granted special grant in addition to the L.R. grant out of the forest revenue accrued from the forests of the respective taluks ?

† Sri B. RACHAIAH.—Sir, *ad hoc* grant has been provided for distribution among the taluks of North Kanara district.

Sri N. B. SIRDESAI.—May I know how much time Government would take to consider over this matter ?

Sri B. RACHAIAH,—Provision has been made in the Panchaythiraj Bill to provide for some portion of the forest revenue to be allotted among the taluk boards.

Sri N. B. SIRDESAI.—Is it not unjust to step this grant for some of the talukas in the malnad areas ?

Sri B. RACHAIAH.—The Bombay Government used to pay some *ad hoc* where more than 50 per cent of the forest is there. Similar procedure is being followed here. The question of giving some *ad hoc* grant to the Khanapur is also under consideration.

Sri B. B. SAYANAK.—May I know when the Government received the representation ?

Sri B. RACHAIAH.—I am sorry, Sir, I cannot remember.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, ಉತ್ತರ ಕನ ಡ ಜಿಲ್ಲೆಯಲ್ಲಿ 100ಕ್ಕೆ 80 ಭಾಗ ಅರಣ್ಯ ಇದೆ. ತಾಲ್ಲೂಕ ಬೋರ್ಡ್ ಆದಾಯ ಇದರಿಂದ ಕಡಿಮೆಯಾಗಿದೆ. ಡಿಸ್ಟ್ರಿಕ್ಟ್ ಡೆವಲಪ್ಮೆಂಟ್ ಕೌನ್ಸಿಲ್ ಮತ್ತು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡು ನಿರ್ಣಯ ಮಾಡಿ ಕೆಲವು ಭಾಗ ಅರಣ್ಯ ಸಂಪತ್ತಿನ ಆದಾಯ ಕೊಡಬೇಕು ಎಂದು ಸರಕಾರಕ್ಕೆ ಮನವಿ ಬಂದಿದೆ, ಅದನ್ನು ಪರಿಶೀಲಿಸಿ ಜಾಗ್ರತೆ ಕೊಡುತ್ತಿರಾ ?

ಶ್ರೀ ಬಿ. ರಾಚಯ್ಯ.—ಆಡ್ ಹಾಕ್ ಆಗಿ ಕೊಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅರಣ್ಯ ಸಂಪತ್ತಿನಿಂದ ಉತ್ಪತ್ತಿ ಜಾಸ್ತಿ ಬರುತ್ತಾ ಇದೆ. ಬರತಕ್ಕಂಥ ಒಟ್ಟು ಉತ್ಪನ್ನದಲ್ಲಿ ಕನಿಷ್ಠ ಪಕ್ಷ ಶೇಕಡ 50 ರಷ್ಟು ಮರೆನಾಡು ಪ್ರದೇಶಕ್ಕಾಗಿ ಇಡಬೇಕು ಎಂದು ಮಾಡುತ್ತಿರಾ ?

ಶ್ರೀ ಬಿ. ರಾಚಯ್ಯ.—ಇದಕ್ಕೆ ಒಂದು ಬಿಲ್ಲು ಬರುತ್ತದೆ, ಆಗ್ಗೆ ತಮ್ಮ ಅಭಿಪ್ರಾಯ ಸೂಚಿಸ ಬಹುದು.